ಶ್ರೀ ಎಂ. ಚಂದ್ರಶೇಖರ್.—ಈ ಅವಧಿಯೊಳಗೆ ಅಂದರೆ ೧೯೮೯ರೊಳಗೆ ಮುಂಗಿಸಿಕೊಡುವಂತೆ ಕ್ರಮ ಕೈಗೊಳ್ಳುತ್ತೇನೆ.

ರಾಜ್ಯದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಬ್ಯಾಂಕ್ ಸ್ಥಾಪಿಸುವ ಬಗ್ಗೆ

೧೧೮೮ ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ) ಮಾನ್ಯ ನಿಯಂತ್ರಿತ ಮಾರುಕಟ್ಟೆ ಮತ್ತು ಖುಷ್ಕಿ ಜಮೀನು ಅಭಿವೃದ್ಧಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿನ ಮಾರುಕಟ್ಟೆ ಸಮಿತಿಗಳ ನಿವ್ವಳ ಆದಾಯವೆಷ್ಟು?

ಆ) ಮಾರುಕಟ್ಟೆ ಸಮಿತಿಗಳ ರಾಜ್ಯಮಟ್ಟದ ಮಹಾ ಮಂಡಲದ ನಿವ್ವಳ ಆದಾಯವೆಷ್ಟು?

ಇ) ರಾಜ್ಯದಲ್ಲಿನ ಮಾರುಕಟ್ಟೆ ಸಮಿತಿಯಿಂದ ರೆಗ್ಯುಲೇಟ್ ಮಾಡಿರುವ ಸರಕುಗಳ ವಹಿವಾಟಿನ ಮೊಬಲಗೆಷ್ಟು?

ಈ) ಪ್ರತಿ ಮಾರುಕಟ್ಟೆ ಸಮಿತಿಯಲ್ಲಿ ರೆಗ್ಯುಲೇಟೆಡ್ ಮಾರ್ಕೆಟಿಂಗ್ ರಾಜ್ಯಮಟ್ಟದ ಬ್ಯಾಂಕು ಮಾಡುವುದರಿಂದ ರೈತರಿಗೆ ಹಾಗೂ ವ್ಯಾಪಾರಸ್ಥರಿಗೆ ಯೋಗ್ಯ ಸಮಯದ ವಹಿವಾಟಿನಲ್ಲಿ ಲಾಭಕಾರಿ ಯಾಗುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ ಆ ಬ್ಯಾಂಕನ್ನು ಸ್ಥಾಪಿಸಲಾಗುವುದೇ?

ಶ್ರೀ ಕೆ. ಅಪ್ಪರನಾಥ ಶೆಟ್ಟಿ (ಮಂಜರಾಯಿ ಮಂತ್ರಿ ನಿಯಂತ್ರಿತ ಮಾರುಕಟ್ಟೆ ಮಂತ್ರಿ ಖುಷ್ಕಿ ಜಮೀನು ಅಭಿವೃದ್ಧಿ ರಾಜ್ಯ ಮಂತ್ರಿಗಳು).—

ಅ) ೧೯೮೬-೮೭ನೇ ಸಾಲಿನ ರಾಜ್ಯದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ನಿವ್ವಳ ಆದಾಯ ರೂ. ೧೧೧೯. ೭೨ (ಲಕ್ಷ ರೂ, ಗಳಲ್ಲಿ)

ಆ) ೧೯೮೬-೮೭ನೇ ಸಾಲಿನ ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯ ನಿವ್ವಳ ಆದಾಯ ರೂ. ೪೩, ೦೬,೫೫೧-೯೪.

ಇ) ೧೯೮೬-೮೭ನೇ ಸಾಲಿನಲ್ಲಿ ರಾಜ್ಯದ ಮಾರುಕಟ್ಟೆ ಸಮಿತಿಯಿಂದ ರೆಗ್ಯುಲೇಟ್ ಮಾಡಿರುವ ಸರಕುಗಳ ವಹಿವಾಟಿನ ಮೌಲ್ಯ (ಕೋಟಿ ರೂಗಳಲ್ಲಿ) ರೂ. ೧,೩೦೭-೦೪.

ಈ) ಪರಿಶೀಲಿಸಲಾಗುತ್ತದೆ.

ಉ) ಉಪ ಪ್ರಶ್ನೆ ಈ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ನನ್ನ (ಈ) ಪ್ರಶ್ನೆಗೆ ಉತ್ತರವಾಗಿ 'ಪರಿಶೀಲಿಸಲಾಗುತ್ತಿದೆ' ಎಂದು ಹೇಳಿದ್ದೀರಿ. ಈ ರಾಜ್ಯ ಮಟ್ಟದ ಬ್ಯಾಂಕನ್ನು ಯಾವಾಗ ಸ್ಥಾಪನೆ ಮಾಡುತ್ತೀರಿ ಎಂಬುದನ್ನು ತಾವು ಹೇಳಬೇಕು ?

ಶ್ರೀ ಕೆ. ಅಪ್ಪರನಾಥಶೆಟ್ಟಿ.—ಈ ರಾಜ್ಯ ಮಟ್ಟದ ಬ್ಯಾಂಕ್ ಸ್ಥಾಪನೆ ಮಾಡುವ ವಿಷಯ ಕರ್ನಾಟಕ ಕೃಷಿ ಉತ್ಪನ್ನ ಮಾರಾಟ ನಿಯಂತ್ರಣ ಕಾಯಿದೆ ೧೯೬೨ಕ್ಕೆ ತಿದ್ದುಪಡಿ ಮಾಡಲು ರಚಿಸಿರುವ ಸಮಿತಿಯ ಮುಂದೆ ಪರಿಶೀಲನೆಯಲ್ಲಿದೆ. ಆ ಸಮಿತಿ ವರದಿ ಬಂದ ಕೂಡಲೇ ಈ ಬಗ್ಗೆ ಪರಿಶೀಲನೆ ಮಾಡಲಾಗುವುದು.

ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್.—ರೆಗ್ಯುಲೇಟೆಡ್ ಮಾರ್ಕೆಟಿಂಗ್ ಯಾರ್ಡ್‌ನಲ್ಲಿ ಬ್ಯಾಂಕ್ ಸ್ಥಾಪನೆ ಮಾಡುವುದರಿಂದ ರೈತರಿಗೆ ಬಹಳ ಅನುಕೂಲವಾಗುತ್ತದೆ. ಆದರೆ ಇದು ಪರಿಶೀಲನೆಯಲ್ಲಿದೆ ಎಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಇದಕ್ಕೆ ಸಂಬಂಧಪಟ್ಟ ಸಮಿತಿಯ ಮುಂದೆ ನಾನೂ ಸಹ ಇದು ಜಾಗ್ರತೆ ಆಗಬೇಕೆಂದು ವಿನಂತಿ ಮಾಡಿಕೊಂಡಿದ್ದೇನೆ. ಆದ್ದರಿಂದ ಆ ಸಮಿತಿಯ ವರದಿ ಯಾವಾಗ ಬರುತ್ತದೆ ಮತ್ತು ಅದನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ಹಾಗೂ ಇದಕ್ಕೆ ಸಂಬಂಧಪಟ್ಟಂತೆ ಯಾವ ಯಾವ ಕಾರ್ಯಕ್ರಮಗಳನ್ನು ಕೈಗೊಂಡಿದ್ದೀರೆಂಬುದನ್ನು ಹೇಳಬೇಕು ?

ಇದಕ್ಕೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರದ ಸಂಬಂಧಪಟ್ಟ ಇಲಾಖೆಗೆ ಏನಾದರೂ ಅರ್ಜಿಯನ್ನು ಸಲ್ಲಿಸಿದ್ದೀರಾ ಎಂಬುದನ್ನು ಸಹ ತಾವು ತಿಳಿಸಬೇಕು ?

ಶ್ರೀ ಕೆ. ಅವಿರನಾಥ ಶೆಟ್ಟಿ.—ಈ ಸಮಿತಿಯು ವರದಿ ಜೂನ್ ಅಂತ್ಯದೊಳಗೆ ಬರುವ ಸಂಭವವಿದೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರ ಪಟ್ಟಿಗಳು

ರಾಜ್ಯದಲ್ಲಿ ಆಂಗ್ಲ ಮಾಧ್ಯಮದಲ್ಲಿ ಕೇಂದ್ರ ಪ್ರೌಢ ಶಿಕ್ಷಣ ಮಂಡಳಿಯ ಪಠ್ಯ ವಸ್ತುವಿನಲ್ಲಿ ವ್ಯಾಸಂಗ ಬೋಧಿಸುತ್ತಿರುವುದು

೧೩೪೪. ಶ್ರೀ ಎನ್. ಟಿ. ಬೊಮ್ಮಣ್ಣ (ಕೂಡ್ಲಿಗಿ).—ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಆಂಗ್ಲ ಮಾಧ್ಯಮದಲ್ಲಿ ಕೇಂದ್ರ ಪ್ರೌಢ ಶಿಕ್ಷಣ ಮಂಡಲಿಯು ಪಠ್ಯವಸ್ತುವಿನಲ್ಲಿ ವ್ಯಾಸಂಗ ಬೋಧಿಸುತ್ತಿರುವ ಶಾಲೆಗಳ ಸಂಖ್ಯೆ ಎಷ್ಟು ?

ಆ) ಈ ರೀತಿಯ ಕೇಂದ್ರ ಪಠ್ಯವಸ್ತುವಿನಲ್ಲಿ ವ್ಯಾಸಂಗದ ಶಾಲೆಗಳು ರಾಜ್ಯದಲ್ಲಿ ಅಸ್ತಿತ್ವಕ್ಕೆ ಬರಲು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಎನ್.ಓ.ಸಿ. ಪಡೆಯುವ ಸಲುವಾಗಿ ಇಂತಹ ಎಷ್ಟು ಶಾಲೆಗಳ ಆಡಳಿತ ಮಂಡಳಿಯಿಂದ ಅರ್ಜಿಗಳನ್ನು ಬಂದಿವೆ ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಮಂತ್ರಿಗಳು).—

ಅ) ೫೦.

ಆ) ಹೌದು.

ಇ) ೪೪.

ಭಾರತಿ ನಗರ ವಿಧಾನಸಭಾ ಕ್ಷೇತ್ರದಲ್ಲಿ ಸರ್ಕಾರಿ ಕಿರಿಯ ಕಾಲೇಜು ಪ್ರಾರಂಭಿಸುವ ಬಗ್ಗೆ

೧೩೪೫. ಶ್ರೀ ಕೆ. ಜೆ. ಜಾರ್ಜ್ (ಭಾರತೀ ನಗರ).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ನಗರದಲ್ಲಿನ ಭಾರತಿ ನಗರದ ವಿಧಾನಸಭಾ ಕ್ಷೇತ್ರದಲ್ಲಿ ಸರ್ಕಾರಿ ಕಿರಿಯ ಕಾಲೇಜು ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಕ್ಷೇತ್ರದಲ್ಲಿ ಸರ್ಕಾರದವರು ಒಂದು ಜೂನಿಯರ್ ಕಾಲೇಜನ್ನು ಆದಷ್ಟು ಶೀಘ್ರವಾಗಿ ಪ್ರಾರಂಭಿಸಲು ಕ್ರಮಕೈಗೊಳ್ಳುವರೇ ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಸಚಿವರು).—

ಅ) ಬಂದಿದೆ.

ಆ) ಆಯಾಕ್ಕರಿಂದ ಪ್ರಸ್ತಾವನೆ ಬಂದರೆ ಪರಿಶೀಲಿಸಲಾಗುವುದು.